**ಅನುಬಂಧ–ಎ**

**"ಮಕ್ಕಳ ಸ್ನೇಹಿ ಗ್ರಾಮ ಪಂಚಾಯತಿ ಅಭಿಯಾನ " ಅಂಗವಾಗಿ ಪೂರ್ವಬಾವಿ ಸಭೆಯಲ್ಲಿ ಸುತ್ತೋಲೆಯಲ್ಲಿನ ಎಲ್ಲಾ ಅಂಶಗಳನ್ನು ಎಲ್ಲರ ಗಮನಕ್ಕೆ ತಂದು (ಸಭೆಯಲ್ಲಿ ಓದುವುದರ ಮೂಲಕ), ಚರ್ಚಿಸಿ ಈ ಕೆಳಕಂಡ ಗುರಿಗಳ ಸಾಧನೆಗೆ ಕಾರ್ಯಕ್ರಮ/ಚಟುವಟಿಕೆಗಳನ್ನು ರೂಪಿಸುವುದು ಹಾಗೂ ತಾತ್ಕಾಲಿಕ ಕಾರ್ಯಕ್ರಮಗಳ/ಚಟುವಟಿಕೆಗಳ ವೇಳಾ ಪಟ್ಟಿಯನ್ನು ತಯಾರಿಸುವುದು.**

**ಒತ್ತು ಕೊಡಬೇಕಾದ ಹಾಗೂ ಸಾಧಿಸಬೇಕಾದ ಗುರಿಗಳು**

1. ಶೇಕಡ 100 ರಷ್ಟು ಮಕ್ಕಳ ಜನನ ನೊಂದಣಿ ಮತ್ತು ಜನನ ಪ್ರಮಾಣ ಪತ್ರಗಳ ವಿತರಣೆ.
2. ಶೇಕಡ 100 ರಷ್ಟು ಮಕ್ಕಳಿಗೆ ಚುಚ್ಚು ಮದ್ದು.
3. ಶೇಕಡ 100 ರಷ್ಟು 3 ರಿಂದ 6 ವರ್ಷದ ಮಕ್ಕಳು ಅಂಗನವಾಡಿ/ಪೂರ್ವ ಪ್ರಾಥಮಿಕ ಕೇಂದ್ರಗಳಿಗೆ ದಾಖಲಾತಿ ಹಾಗೂ ಹಾಜರಾತಿ.
4. ಶೆಕಡ 100 ರಷ್ಟು ಮಕ್ಕಳಿಗೆ ಪೌಷ್ಟಿಕ ಆಹಾರ/ಅಂಗನವಾಡಿ ಸೇವೆಗಳ ಪೂರೈಕೆ.
5. ಗ್ರಾಮ ಪಂಚಾಯತಿಯಲ್ಲಿನ ತೀವ್ರ ಅಪೌಷ್ಟಿಕ ಮತ್ತು ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳನ್ನು ಪತ್ತೆ ಹಚ್ಚುವುದು ಹಾಗೂ ಅಂಥಹ ಮಕ್ಕಳಿಗೆ ಪೌಷ್ಟಿಕ ಅಂಶವನ್ನು ಒದಗಿಸಲು/ಪೂರೈಸಲು ಕ್ರಮ ಕೈಗೊಳ್ಳುವುದು.
6. ಶೇಕಡ 100 ರಷ್ಟು 6ರಿಂದ 14 ವರ್ಷದ ಮಕ್ಕಳು ಶಾಲೆಗೆ ದಾಖಲಾತಿ ಹಾಗೂ ಹಾಜರಾತಿ ( ಶಾಲೆಗಳ ಪ್ರಾರಂಭದ ಅವಧಿಯಲ್ಲಿ)
7. ಮಕ್ಕಳು ಮತ್ತು ಕಿಶೋರಾವಸ್ಥೆಯ ಕಾರ್ಮಿಕತೆಯಿಂದ ಮುಕ್ತತೆ (ಬಾಲ ಕಾರ್ಮಿಕತೆ ಯಿಂದ ಮುಕ್ತತೆ)
8. ಶೇಕಡ 0 ಬಾಲ್ಯ ವಿವಾಹ ಪ್ರಕರಣ
9. 18 ವರ್ಷ ಪೂರ್ಣಗೊಳ್ಳದ ಶೇಕಡ 100 ರಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ.
10. ಮಕ್ಕಳ ಜೀತ ಪದ್ಧತಿ ಮುಕ್ತತೆ.
11. ಮಕ್ಕಳ ಸಾಗಾಟ ಮುಕ್ತತೆ (0 ಪ್ರಮಾಣ ಸಾಗಾಟ)
12. ಮಕ್ಕಳ ಸುರಕ್ಷತೆ ಮತ್ತು ಮಕ್ಕಳ ಮೇಲೆ ಆಗುವ ದೌರ್ಜನ್ಯ ತಡೆಯುವುದು.
13. ಶಿಶು ಮರಣ ಪ್ರಮಾಣ ತಗ್ಗಿಸುವುದು.
14. ಮೂಡ ನಂಬಿಕೆಗಳಿಗೆ ಮಕ್ಕಳ ಬಲಿ ಆಗುವುದನ್ನು ಸಂಪೂರ್ಣ ನಿಷೇಧ.
15. ಮಕ್ಕಳ ಬಿಕ್ಷಾಟನೆ ನಿಷೇಧ.
16. ಬೀದಿ ಮಕ್ಕಳು ಇದ್ದಲ್ಲಿ, ಬೀದಿ ಮಕ್ಕಳಿಗೆ ಪುನರ್ವಸತಿ ವ್ಯವಸ್ಥೆ/ಅಗತ್ಯ ಸೌಲಭ್ಯ ಕಲ್ಪಿಸುವುದು.
17. ಹೆಚ್.ಐ.ವಿ. ಸೋಂಕಿತ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಅಗತ್ಯ ಬೆಂಬಲ.
18. ಆರೈಕೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಅಗತ್ಯ ಬೆಂಬಲ.
19. ವಿಶೇಷ ಅಗತ್ಯಉಳ್ಳ ಮಕ್ಕಳಿಗೆ ಅಗತ್ಯ ಬೆಂಬಲ.
20. ಬಡ ಹಾಗೂ ದುರ್ಬಲ ವರ್ಗದ ಮಕ್ಕಳ ಉನ್ನತ ಶಿಕ್ಷಣಕ್ಕೆ ಬೆಂಬಲ.
21. ಅಂಗನವಾಡಿ ಮತ್ತು ಶಾಲೆಗಳಲ್ಲಿ ಮೂಲಭೂತ ಸೌಕರ್ಯ, ವಿಶೇಷವಾಗಿ ಸ್ವಚ್ಛತೆ ಮತ್ತು ನೈರ್ಮಲ್ಯತೆ.
22. ತರೆದ ಗುಂಡಿಗಳನ್ನು, ಬೋರ್‌ವೆಲ್‌ಗಳನ್ನು ಸರಿಯಾದ ಕ್ರಮದಲ್ಲಿ ಮುಚ್ಚಿರುವುದು. ಈ ಗುಂಡಿಗಳ ಮೂಲಕ ಮಕ್ಕಳ ಮರಣವನ್ನು ತಡೆಯುವುದು.
23. ಸರಕು ಸಾಗಣೆ ವಾಹನಗಳಲ್ಲಿ ಮಕ್ಕಳ ಪ್ರಯಾಣ ನಿಷೇದ.
24. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ದಾರ್ಮಿಕ ಸ್ಥಳ, ಸಾರ್ವಜನಿಕ ಸ್ಥಳಗಳಲ್ಲಿ ಬಿಕ್ಷಾಟನೆ ನಿಷೇಧ ಕುರಿತು ನಾಮ ಫಲಕ ಅಳವಡಿಕೆ.
25. ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ವ್ಯವಸ್ಥೆ.
26. ವಲಸೆ ಕಾರ್ಮಿಕರ ಮಾಹಿತಿ ಮತ್ತು ಟ್ರ್ಯಾಕಿಂಗ್ ವ್ಯವಸ್ಥೆ.